ಪ್ರ-72-(12)

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ. ಗೋವಿಂದರಾಜು ರವರು ನಿಯಮ 72ರ ಅಡಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರ ಉತ್ತರ

**ವಿಷಯ: ಕೋಲಾರ ಜಿಲ್ಲೆ, ತೋಟಗಾರಿಕೆ ಬೆಳೆಗೆ ಹೆಸರಾಂತ ಜಿಲ್ಲೆ, ಬೆಂಗಳೂರು ನಗರಕ್ಕೆ ಸಮೀಪವಿದೆ, ಇಲ್ಲಿ ಇರುವ ರೈತರು ಬಹುತೇಕ ಬೋರ್ ವೆಲ್ ಗಳನ್ನು ನಂಬಿ ಕೃಷಿ ಮಾಡುವವರೇ ಹೆಚ್ಚು, ಇಲ್ಲಿ ಬೆಳೆದಂತ ಟೋಮೇಟೋ ಹಾಗೂ ಇನ್ನಿತರೆ ತರಕಾರಿಗಳು, ಬಾಂಗ್ಲಾದೇಶ, ಕೋಲ್ಕತ್ತ ಹಾಗೂ ಇನ್ನಿತರೆ ಬೇರೆ ಬೇರೆ ರಾಜ್ಯಗಳಿಗೆ ಕಳುಹಿಸಿಕೊಡಲಾಗುತ್ತಿತ್ತು. ಆದರೆ, ಇತ್ತೀಚೆಗೆ ಟೊಮೆಟೊ ಹಾಗೂ ತರಕಾರಿಗಳಿಗೆ ರೋಗ ಬಾಧೆ (ಹಳದಿ ರೋಗ) ಹೆಚ್ಚಾಗಿರುವುದರಿಂದ ಹೊರ ರಾಜ್ಯಗಳಿಗೆ ತರಕಾರಿಗಳನ್ನು ಕಳುಹಿಸಲು ಸಾಧ್ಯವಾಗುತ್ತಿಲ್ಲದಿರುವ ಕುರಿತು".**

**ಉತ್ತರ:**ಕೋಲಾರ ಜಿಲ್ಲೆಯಲ್ಲಿ 17958 ಹೆಕ್ಟೇರ್‌ಗಳಲ್ಲಿ ತರಕಾರಿ ಬೆಳೆಗಳನ್ನು ಬೆಳೆಯಲಾಗುತ್ತಿದ್ದು, ಅದರಲ್ಲಿ 10,299 ಹೆಕ್ಟೇರ್‌ಗಳಷ್ಟು ಟೊಮೆಟೊ ಬೆಳೆಯನ್ನು ಬೆಳೆಯಲಾಗುತ್ತಿದೆ. ಜಿಲ್ಲೆಯಲ್ಲಿ ಒಟ್ಟು ತರಕಾರಿ ಬೆಳೆಗಳ ಉತ್ಪಾದನೆ 5,37,123 ಟನ್ ಗಳಷ್ಟಿದ್ದು, ಟೋಮೆಟೋ ಬೆಳೆಯ ಉತ್ಪಾದನೆ 1,83,734ಟನ್ ಗಳಷ್ಟಿರುತ್ತದೆ.

ಇತ್ತೀಚಿನ ಕೋಲಾರ ಜಿಲ್ಲೆಯಲ್ಲಿ ಮಳೆಯ ಪ್ರಮಾಣವು ವಾಡಿಕೆಗಿಂತ ಹೆಚ್ಚಾಗಿದ್ದು, ಅಕ್ಟೋಬರ್ ಮತ್ತು ನವೆಂಬರ್ ಮಾಹೆಗಳಲ್ಲಿ 37 ಮಳೆಯ ದಿನಗಳಾಗಿರುತ್ತವೆ. ಪ್ರತಿ ವರ್ಷದ ಅಕ್ಟೋಬರ್ ಮತ್ತು ನವೆಂಬರ್ ಮಾಹೆಯ ವಾಡಿಕೆ ಮಳೆಗಿಂತ ಈ ವರ್ಷ ಶೇ.345ರಷ್ಟು ಹೆಚ್ಚಿನ ಪ್ರಮಾಣದ ಮಳೆಯಾಗಿರುತ್ತದೆ ಹಾಗೂ ವಾತಾವರಣದಲ್ಲಿ ಆದ್ರತೆ (RH) ಮತ್ತು ತೇವಾಂಶ ಅಕ್ಟೋಬರ್ ಮತ್ತು ನವೆಂಬರ್ ಮಾಹೆಯಲ್ಲಿ ಹೆಚ್ಚಾಗಿದ್ದು ಟೊಮ್ಯಾಟೊ ಹಾಗೂ ಇತರೆ ತರಕಾರಿ ಬೆಳೆಗಳಲ್ಲಿ ಶಿಲೀಂಧ್ರ ಹಾಗೂ ಬ್ಯಾಕ್ಟೀರಿಯಾ ರೋಗಗಳಾದ ಅಂಗಮಾರಿ ಮತ್ತು ಎಲೆ ಚುಕ್ಕೆ ರೋಗಗಳು ಉಲ್ಬಣಗೊಂಡಿರುತ್ತವೆ. ಇದರಿಂದ ಟೊಮ್ಯಾಟೊ ಹಣ್ಣಿನ ಹಾಗೂ ಇತರೆ ತರಕಾರಿ ಬೆಳೆಗಳ ಬೆಳವಣಿಗೆ ಹಾಗೂ ಗುಣಮಟ್ಟ ಶೇ.50ಕ್ಕಿಂತ ಕಡಿಮೆಯಾಗಿದ್ದು ಇಳುವರಿ ಕುಂಠಿತವಾಗಿದೆ.

ದಿನಾಂಕ:22.11.2021 ರಂದು ಸನ್ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ತೋಟಗಾರಿಕೆ ಸಚಿವರು ಹಾಗೂ ಜಿಲ್ಲೆಯ ಇತರೆ ಜನಪ್ರತಿನಿಧಿಗಳು ಜಿಲ್ಲೆಯಲ್ಲಿ ಭಾರಿ ಮಳೆಯಿಂದ ನಷ್ಟ ಹೊಂದಿದ ತಾಕುಗಳಿಗೆ ಭೇಟಿ ನೀಡಿ ಪರಿಶೀಲಿಸಿರುತ್ತಾರೆ.ತೋಟಗಾರಿಕೆ, ಕೃಷಿ ಹಾಗೂ ಕಂದಾಯ ಇಲಾಖೆಗಳ ಅಧಿಕಾರಿಗಳು ಜಂಟಿ ಸಮೀಕ್ಷೆ ನಡೆಸಿ,7165.5ಹೆಕ್ಟೇರ್ ವಿಸ್ತೀರ್ಣದ ತೋಟಗಾರಿಕೆ ಬೆಳೆಗಳಿಗೆ ಹಾನಿಯಾಗಿರುವುದನ್ನು ಅಂದಾಜಿಸಲಾಗಿದೆ. NDRF/SDRF ಮಾರ್ಗಸೂಚಿಯಂತೆರೈತರಿಗೆ ಪರಿಹಾರ ಪಾವತಿ ಮಾಡುವ ಕ್ರಮವು ಪ್ರಗತಿಯಲ್ಲಿದೆ.

ಅಧಿಕ ಮಳೆಯಿಂದ ಶೇ.50%ಕ್ಕಿಂತ ಹೆಚ್ಚು ಬೆಳೆ ನಷ್ಟ ಆಗಿರುವುದರಿಂದ ಪ್ರಧಾನ್ ಮಂತ್ರಿ ಫಸಲ್ ಭೀಮಾ ಯೋಜನೆಯಡಿ ವಿಮಾ ನೊಂದಾಯಿಸಿರುವ ರೈತರಿಗೆ ಪರಿಹಾರವನ್ನು ಇತ್ಯರ್ಥಪಡಿಸಲು ವಿಮಾ ಕಂಪನಿಗೆ ಸೂಚಿಸಲಾಗಿರುತ್ತದೆ.

ಟೊಮೇಟೋಹಾಗೂ ತರಕಾರಿ ಬೆಳೆಗಳಲ್ಲಿ, ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಹಾಗೂ ವಿಶ್ವವಿದ್ಯಾಲಯದ ತಜ್ಞರು ರೈತರ ತಾಕುಗಳಿಗೆ ಭೇಟಿ ನೀಡಿ ನಿಯಂತ್ರಣ ಕ್ರಮಗಳ ಬಗ್ಗೆ ರೈತರಿಗೆ ತಿಳುವಳಿಕೆ ನೀಡುತ್ತಿದ್ದಾರೆ. ವಿವಿಧ ಕೀಟ/ ರೋಗಗಳ ನಿಯಂತ್ರಣ ಕ್ರಮಗಳ ಬಗ್ಗೆ ಪತ್ರಿಕೆ, ಕರಪತ್ರ, ಪೋಸ್ಟರ್, ತರಬೇತಿ ಮತ್ತು ರೈತರ Whatsapp Group ಗಳ ಮೂಲಕ ತಾಂತ್ರಿಕ ಮಾಹಿತಿ ಒದಗಿಸಲಾಗುತ್ತಿದೆ. ಇಲಾಖೆಯ ಯೋಜನೆಗಳಲ್ಲಿ ರೈತರಿಗೆ ಸಸ್ಯ ಸಂರಕ್ಷಣೆ ಔಷಧಿಗಳನ್ನು ಖರೀದಿಸಲು ಸಹಾಯಧನ ಒದಗಿಸಲಾಗುತ್ತಿದೆ.

**HORTI / 570/ HGM / 2021**

(ಮುನಿರತ್ನ)

ತೋಟಗಾರಿಕೆ ಹಾಗೂ ಯೋಜನೆ,

ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.